ವಿಷಯ :– ನಗರಸಭೆಗಳಿಗೆ ಆಕ್ಟ್ರಾಯ ಅನುದಾನದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 627 (1206)

ಶ್ರೀ ಬ್ಲೇಸಿಯಸ್ ಡಿಸೋಜಾ (ಮಂಗಳೂರು):– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿವಿಧ ಮಹಾನಗರಸಭೆಗಳಿಗೆ ಮಂಜೂರು ಮಾಡಿದ ಆಕ್ಟ್ರಾಯ್ ಅನುದಾನ.

ಆ) ಆಕ್ಟ್ರಾಯ್ ಅನುದಾನ ನಿರ್ಧರಿಸಲು ಅನುಸರಿಸುವ ವಿಧಾನವೇನು ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

ಅ) ಅನುಬಂಧದಲ್ಲಿ ವಿವರಿಸಿದಂತೆ.

ಆ) 1979–80 ರಲ್ಲಿ ವಿವಿಧ ಮುನಿಸಿಪಾಲಿಟಿಗಳು ಶೇಖರಿಸಿದ ಆಕ್ಟ್ರಾಯ್ ಮೊತ್ತವನ್ನು ತಳಹದಿಯನ್ನಾಗಿ ತೆಗೆದುಕೊಳ್ಳಲಾಗಿದೆ. ಆ ಮೊತ್ತಕ್ಕೆ ಪ್ರತಿವರ್ಷ 5% ನ್ನು ಕೂಡಿಸುತ್ತಾ 1981–82 ರ ವರೆಗೆ ಹಣವನ್ನು ಮಂಜೂರು ಮಾಡಲಾಗಿತ್ತು. ನಂತರ 1981–82 ರಲ್ಲಿ ನೀಡಿದ ಮೊತ್ತಕ್ಕೆ 10% ನ್ನು ಕೂಡಿಸುತ್ತಾ 1987–88 ರ ವರೆಗೆ ಹಣ ಮಂಜೂರು ಮಾಡಲಾಗಿತ್ತು. ನಂತರ 1987–88 ರ ನಂತರ ಮೊತ್ತಕ್ಕೆ 12½% ಮೊತ್ತವನ್ನು ಕೂಡಿಸುತ್ತಾ ಹಣವನ್ನು ಮಂಜೂರು ಮಾಡಲಾಗುತ್ತಿದೆ.

ಅನುಬಂಧ

ಮಹಾನಗರ ಪಾಲಿಕೆಗಳ ಹೆಸರು	1990–91ರ 1ನೇ ಹಾಗೂ 2ನೇ ತ್ರೈಮಾಸಿಕದಲ್ಲಿ ಮಂಜೂರು ಮಾಡಿರುವ ಆಕ್ಟ್ರಾಯ್ ಅನುದಾನ ರೂ. ಲಕ್ಷಗಳಲ್ಲಿ		ನೀರು ಸರಬರಾಜು ಹಾಗೂ ವಿದ್ಯುತ್‌ಚ್ಛಕ್ತಿ ಬಾಕಿಯನ್ನು ಕಡಿತಗೊಳಿಸಿ 1ನೇ ಮತ್ತು 2ನೇ ತ್ರೈಮಾಸಿಕದಲ್ಲಿ ಬಿಡುಗಡೆಯಾಗಿರುವ ಹಣ ರೂ. ಲಕ್ಷಗಳಲ್ಲಿ	
	1ನೇ ಕಂತು	2ನೇ ಕಂತು	1ನೇ ಕಂತು	2ನೇ ಕಂತು
1) ಬೆಂಗಳೂರು	7.68,78.205	7,68,78.205	5.68,78.205	5.32,72,697
2) ಬೆಳಗಾಂ	74.10.111	74.10.111	84,10,111	37.10,111
2ಎ) ಬೆಳಗಾಂ ಕಂಟೊನ್ಮೆಂಟ್ ಬೋರ್ಡ್	8.23,345	8.23.345	8,23,345	8.23,345
3) ಮಂಗಳೂರು	66,50,453	66,50,453	33,99,959	33.25,388
4) ಮೈಸೂರು	73.16.647	73,16,647	33,16,647	37.16,647
5) ಹುಬ್ಬಳ್ಳಿ–ಧಾರವಾಡ	1,40.64.453	1.40,64,453	90,10,262	70.40,036
6) ಗುಲ್ಬರ್ಗಾ	19.78.777	19,78,777	10,78,777	10,77,031
ಒಟ್ಟು :	11.51.21,991	11,51.21,991	7,79,17,306	7,29.65,255

ವಿಷಯ :– ರಾಷ್ಟ್ರೀಯ ಜಲನಯನ ಯೋಜನೆಗೆ ಕೇಂದ್ರ ಸರ್ಕಾರ ನೀಡಿದ ಸಹಾಯ ಧನದ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 628 (1208)

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಮಂಗಳೂರು):– ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯಕ್ಕೆ ರಾಷ್ಟ್ರೀಯ ಜಲಾನಯನ ಯೋಜನೆಯನ್ನು ಯಾವಾಗ ಮಂಜೂರು ಮಾಡಲಾಯಿತು ?

ಅ) ಈ ಯೋಜನೆಗೆ ಕೇಂದ್ರ ಸರ್ಕಾರವು ಕೊಟ್ಟ ಸಹಾಯ ಧನವೆಷ್ಟು ?

ಇ) ರಾಷ್ಟ್ರೀಯ ಜಲಾನಯನ ಯೋಜನೆಯನ್ನು ರಾಜ್ಯದ ಪ್ರತಿ ಜಿಲ್ಲೆಯ ಎಷ್ಟು ತಾಲ್ಲೂಕುಗಳಿಗೆ ಮಂಜೂರಾತಿ ನೀಡಿದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :-

ಅ) 1986–87.

ಆ) ಈ ಯೋಜನೆಗೆ ಕೇಂದ್ರ ಸರ್ಕಾರವು 1986–87 ರಿಂದ 1990–91 ರ ವರೆಗೆ ರೂ. 2.437.04 ಲಕ್ಷ ರೂಪಾಯಿಗಳನ್ನು ಒದಗಿಸಿದೆ.

ಇ) ಈ ಯೋಜನೆಯು ಕಾರ್ಯಗತಗೊಂಡಾಗಿನಿಂದ ಜಿಲ್ಲಾವಾರು ತಾಲ್ಲೂಕುಗಳಲ್ಲಿನ ವಿವರವು ಈ ಕೆಳಕಂಡಾತಿದೆ.

ಕ್ರಮ ಸಂಖ್ಯೆ	ಜಿಲ್ಲೆಗಳು	ತಾಲ್ಲೂಕುಗಳ ಸಂಖ್ಯೆ
1)	ಬೆಂಗಳೂರು (ಗ್ರಾ)	4
2)	ಬಳ್ಳಾರಿ	5
3)	ಬಿಜಾಪುರ	5
4)	ಬೆಳಗಾಂ	5
5)	ಬೀದರ್	4
6)	ಚಿತ್ರದುರ್ಗ	6
7)	ಧಾರವಾಡ	6
8)	ಗುಲ್ಬರ್ಗಾ	5
9)	ಹಾಸನ	5
10)	ಕೋಲಾರ	6
11)	ಮೈಸೂರು	5
12)	ರಾಯಚೂರು	7
13)	ತುಮಕೂರು	5

ವಿಷಯ :- ತ್ರಿಭಾಷಾ ಸೂತ್ರದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 629 (1007)

ಶ್ರೀ ಕೆ. ಎಸ್. ಮಾಡ್ಗೇಕರ್ (ಬಾಗೇವಾಡಿ) :- ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಲಿ ವಿಧಿಸಲಾಗಿರುವ ತ್ರಿಭಾಷಾ ಸೂತ್ರದಿಂದ ಅಲ್ಪ ಸಂಖ್ಯಾತರಿಗೆ ಅನ್ಯಾಯವಾಗಿಲ್ಲವೇ?

ಆ) ಅಲ್ಪ ಸಂಖ್ಯಾತರ ಭಾಷೆಗಳು ಯಾವುವು ಮತ್ತು ಅವುಗಳನ್ನು ಬಳಸಿಕೊಂಡಿರುವ ಕ್ಷೇತ್ರಗಳು ಯಾವುವು ?

ಇ) ಈ ಕ್ಷೇತ್ರಗಳಲ್ಲಿ ಹಾಲಿ ಇರುವ ತ್ರಿಭಾಷಾ ಸೂತ್ರವನ್ನು ತಿದ್ದುಪಡಿ ಮಾಡಲು ಉದ್ದೇಶಿಸಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) :-

ಅ) ಇಲ್ಲ.

ಆ) ಉರ್ದು, ಮರಾಠಿ, ತಮಿಳು, ತೆಲಗು ಮತ್ತು ಮಲಯಾಳಂ ಇವು ಅಲ್ಪ ಸಂಖ್ಯಾತರ ಭಾಷೆಗಳು ಎಂದು ಸರ್ಕಾರ ಘೋಷಿಸಿದೆ. ಅಲ್ಪಸಂಖ್ಯಾತರ ಕ್ಷೇತ್ರವೆಂದು ಸರ್ಕಾರವು ಪ್ರಕಟಿಸಿರುವ ಪಟ್ಟಿಯನ್ನು ಲಗತ್ತಿಸಿದೆ.

ಇ) ಇಲ್ಲ.